ದಿನಾಂಕಃ **26-02-2021**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಎಸ್.ಎಸ್./ಆರ್.ಕೆ. ವಕೀಲರಿಂದಃ-

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ದಿನಾಂಕ **16/01/1980, 13/11/1975** ತಾರೀಖುಗಳ ಕ್ರಯಪತ್ರಗಳ ದೃಢೀಕೃತ ನಕಲುಗಳನ್ನು ನಿ.ಪಿ.**1** ಮತ್ತು **2** ಎಂದು, ಫಸಲು ಪಹಣಿಗಳ ದೃಢೀಕೃತ ನಕಲು ಹಾಗೂ ಇಂಡೆಕ್ಸ್ ಆಫ್ ಲ್ಯಾಂಡ್ ಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**3** ರಿಂದ ನಿ.ಪಿ.**7** ರವರೆಗೆ ಗುರುತಿಸಲಾಯಿತು. ಸರ್ವೆ ನಂ.**198** ರ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**8** ಎಂದು, ಸರ್ವೆ ನಂ.**198/2** ರ ಪಹಣಿಪತ್ರಿಕೆಗಳ ನಕಲನ್ನು ನಿ.ಪಿ.**9** ಮತ್ತು **10** ಎಂದು, ರೆಕಾರ್ಡ್ ಆಫ್ ರೈಟ್ಸ್ ನ್ನು ನಿ.ಪಿ.**11** ಮತ್ತು **12** ಎಂದು, ಋಣಭಾರಗಳ ಪ್ರಮಾಣಪತ್ರಗಳನ್ನು ನಿಪಿ.**13** ಮತ್ತು **14** ಎಂದು, ಮಾಯಮ್ಮ, ಮಾದೇಗೌಡ ಮತ್ತು ಮಹದೇವ ಇವರ ಮರಣ ಪ್ರಮಾಣಪತ್ರಗಳನ್ನು ಕ್ರಮವಾಗಿ ನಿಪಿ.**15** ರಿಂದ **17** ರವರೆಗೆ ಗುರುತಿಸಲಾಯಿತು.

ಮುಂದುವರಿದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ತಿ. ನರಸೀಪುರ.